ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 563

ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 05.02.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯ ರಸ್ತೆ ಸಾರಿಗೆ ನಿಗಮವು ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಸೇವೆಯನ್ನು ಒದಗಿಸುವ ಹಿನ್ನೆಲೆಯಲ್ಲಿ, ನಾಲ್ಕು ವಿಭಾಗಗಳನ್ನು ಮಾಡಿದ್ದರೂ, ಈವರೆಗೂ ನಿರೀಕ್ಷಿತ ಫಲಿತಾಂಶ ಬಂದಿಲ್ಲವೆಂದು ಹೇಳಲಾಗುತ್ತಿದ್ದು, ಈ ಕುರಿತು ಸರ್ಕಾರದ ನಿಲುವೇನು;	ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಸೇವೆಯನ್ನು ಒದಗಿಸುವ ಹಿನ್ನೆಲೆಯಲ್ಲಿ, ನಾಲ್ಕು ವಿಭಾಗಗಳನ್ನಾಗಿ ವಿಭಜಿಸಿದ ನಂತರ ಧ್ಯೇಯೋದ್ದೇಶಗಳನ್ನು ಸಾಧಿಸಿರುವುದಕ್ಕೆ ಸಂಬಂಧಿಸಿದಂತೆ ವಿವರಗಳನ್ನು ಅನುಬಂಧ 'ಅ'ರಲ್ಲಿ ನೀಡಲಾಗಿದೆ.
ಆ)	ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಒಟ್ಟು ಇರುವ ವಾಹನಗಳ ಸಂಖ್ಯೆ ಎಷ್ಟು; (ವಿಭಾಗವಾರು ವಿವರ ನೀಡುವುದು)	ನಾಲ್ಕೂ ಸಾರಿಗೆ ಸಂಸ್ಥೆಗಳಲ್ಲಿನ ಒಟ್ಟು ಬಸ್ಸುಗಳ ಸಂಖ್ಯೆಯ ವಿವರ ಈ ಕೆಳಕಂಡಂತಿದೆ: ಸಂಸ್ಥೆಗಳು — ಒಟ್ಟು ವಾಹನಗಳ ಸಂಖ್ಯೆ ಕ.ರಾ.ರ.ಸಾ.ನಿಗಮ — 8371 ಬೆಂ.ಮ.ಸಾ.ಸಂಸ್ಥೆ — 6537 ವಾ.ಕ.ರ.ಸಾ.ಸಂಸ್ಥೆ — 4900 ಈ.ಕ.ರ.ಸಾ.ಸಂಸ್ಥೆ — 4629 ಒಟ್ಟು — 24437 ವಲಯವಾರು ವಿವರವನ್ನು ಅನುಬಂಧ 'ಆ'ರಲ್ಲಿ ನೀಡಲಾಗಿದೆ.
ಇ)	ಈ ವಾಹನಗಳನ್ನು ಖರೀದಿಸಿದ ಎಷ್ಟು ವರ್ಷಗಳ ಅವಧಿಯ ನಂತರ ಸ್ಕ್ರ್ಯಾಪ್ **(Scrap)** ಮಾಡಲಾಗುವುದು;	ನಾಲ್ಕೂ ಸಾರಿಗೆ ಸಂಸ್ಥೆಗಳಲ್ಲಿ ವಾಹನಗಳನ್ನು ನಿಷ್ಕ್ರಿಯಗೊಳಿಸಲು ಕೆಳಗಿನಂತೆ ಮಾನದಂಡಗಳನ್ನು ಅನುಸರಿಸಲಾಗುತ್ತಿರುತ್ತದೆ: ಕ.ರಾ.ರ.ಸಾ.ನಿಗಮ: ➢ ಸಾಮಾನ್ಯ/ ನಾನ್ ಎ.ಸಿ ಮಾದರಿ ವಾಹನಗಳು 9.0 ಲಕ್ಷ ಸವಕಳಿ ಕಿ.ಮೀ. ಕ್ರಮಿಸಿದ ನಂತರ ನಿರುಪಯುಕ್ತಗೊಳಿಸಲು ಅನುಮತಿ ನೀಡಲಾಗುತ್ತಿರುತ್ತದೆ. ➢ ಪ್ರತಿಷ್ಠಿತ ಎಸಿ ಕರೋನಾ ಸ್ಲೀಪರ್ ವಾಹನಗಳನ್ನು 11.0 ಲಕ್ಷ ಕಿ.ಮೀ.ಗಳಿಗೆ ಮತ್ತು ಕರೋನಾ ಸೀಟರ್ ವಾಹನಗಳನ್ನು 10.0 ಲಕ್ಷ ಕಿ.ಮೀ.ಗಳಿಗೆ ನಿರುಪಯುಕ್ತಗೊಳಿಸಲು ಅನುಮತಿ ನೀಡಲಾಗುತ್ತಿರುತ್ತದೆ. ➢ ಪ್ರತಿಷ್ಠಿತ ವಾಹನಗಳಾದ ವೋಲ್ವೋ, ಸ್ಕ್ಯಾನಿಯಾ, ಮರ್ಸಿಡಿಸ್ ಬೆಂಜ್ ವಾಹನಗಳು 13.0 ಲಕ್ಷ ಸವಕಳಿ ಕಿ.ಮೀ. ಕ್ರಮಿಸಿದ ನಂತರ ನಿರುಪಯುಕ್ತಗೊಳಿಸಲು ಅನುಮತಿ ನೀಡಲಾಗುತ್ತಿರುತ್ತದೆ. ಅಂತೆಯೇ, ವಾಹನಗಳ ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗತಿಗಳನ್ನಾಧರಿಸಿ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ಅನುಮತಿಸಲಾಗುತ್ತಿರುತ್ತದೆ.

<table>
<tr><td></td><td></td><td>
<u>ಬೆಂ.ಮ.ಸಾ.ಸಂಸ್ಥೆ:</u>

ಸಂಸ್ಥೆಯಲ್ಲಿ 8.5 ಲಕ್ಷ ಕಿ.ಮೀ.ಗಳು ಕ್ರಮಿಸಿರುವ ಅಥವಾ 11 ವರ್ಷಗಳ ವಯೋಮಿತಿ ಪೂರೈಸಿರುವ (ಇವುಗಳಲ್ಲಿ ಯಾವುದು ಮೊದಲೋ) ವಾಹನಗಳನ್ನು ಅವುಗಳ ಭೌತಿಕ ಹಾಗೂ ತಾಂತ್ರಿಕ ಸ್ಥಿತಿಯ ಆಧಾರದ ಮೇಲೆ ನಿಷ್ಕ್ರೀಯಗೊಳಿಸಲು ಕ್ರಮಕೈಗೊಳ್ಳಲಾಗುತ್ತಿರುತ್ತದೆ.

<u>ವಾ.ಕ.ರ.ಸಾ.ಸಂಸ್ಥೆ:</u>

ಸಂಸ್ಥೆಯಲ್ಲಿ ವಾಹನವು ಗರಿಷ್ಠ 15 ವರ್ಷದ ತನಕ ಮಾತ್ರ ಕಾರ್ಯಾಚರಣೆ ಮಾಡಲಾಗುವುದು. ಅಲ್ಲದೇ ವಾಹನಗಳು ನಿಗದಿತ ಕಿ.ಮೀ. ಅಂದರೆ 9 ಲಕ್ಷ (ಉತ್ತರಕನ್ನಡ ವಿಭಾಗಕ್ಕೆ 8 ಲಕ್ಷ ಕಿ.ಮೀ.) ಕ್ರಮಿಸಿದ ನಂತರ ವಾಹನಗಳ ತಾಂತ್ರಿಕ ಸ್ಥಿತಿಗತಿಯನ್ನು ಪರಿಗಣಿಸಿ ಸ್ಕ್ರ್ಯಾಪ್ (Scrap) ಮಾಡಲಾಗುವ ಕ್ರಮ ಜಾರಿಯಲ್ಲಿರುತ್ತದೆ.

<u>ಈ.ಕ.ರ.ಸಾ.ಸಂಸ್ಥೆ:</u>

ಸಂಸ್ಥೆಯಲ್ಲಿ ಪ್ರಯಾಣಿಕರು ಪ್ರಯಾಣ ಮಾಡುವ ಮಜಲು ವಾಹನ ಮತ್ತು ಒಪ್ಪಂದ ವಾಹನಗಳಿಗೆ ವಾಹನ ನೊಂದಣೆ ದಿನಾಂಕದಿಂದ 15 ವರ್ಷಗಳ ವರೆಗೆ ವಯೋಮಿತಿ ವಿಧಿಸಿ, ಅದರಂತೆ 15 ವರ್ಷ ವಯೋಮಿತಿಯ ವಾಹನಗಳನ್ನು ನಿಷ್ಕ್ರಿಯೆಗೊಳಿಸಲಾಗುತ್ತಿದೆ.

ನಿಗದಿತ 15 ವರ್ಷಕ್ಕೂ ಮುಂಚಿತವಾಗಿ ಮೆ: ಅಶೋಕ ಲೇಲ್ಯಾಂಡ್/ಮೆ: ಟಾಟಾ ಮೋಟಾರ್ಸ್ ಹಾಗೂ ತತ್ಸಮಾನ ಮಾದರಿಯ ಸಾಮಾನ್ಯ ವಾಹನ 9.00 ಲಕ್ಷ ಕಿ.ಮೀ. ಹಾಗೂ ಕರೋನಾ ಹವಾನಿಯಂತ್ರಿತ ವಾಹನ 11.00 ಲಕ್ಷ ಕಿ.ಮೀ. ಕ್ರಮಿಸಿದಲ್ಲಿ ಅಂತಹ ವಾಹನಗಳ ತಾಂತ್ರಿಕ ಮತ್ತು ಭೌತಿಕ ಸ್ಥಿತಿಗತಿಯನ್ನು ಪರಿಶೀಲಿಸಿ ಉತ್ತಮ ಸ್ಥಿತಿಯ ವಾಹನಗಳ ಕಾರ್ಯಾಚರಣೆಯನ್ನು ಮುಂದುವರೆಸಲಾಗುತ್ತದೆ. ಸ್ಥಿತಿಗತಿ ಸರಿಯಾಗಿರದ ವಾಹನಗಳನ್ನು ನಿಷ್ಕ್ರಿಯೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
</td></tr>
<tr><td>ಈ</td><td>ಸದರಿ ವಾಹನಗಳ ಸಂಚಲನಕ್ಕೆ ಪ್ರತಿ ಕಿ.ಮೀ.ಗೆ ತಗಲುವ ವೆಚ್ಚವೆಷ್ಟು?</td><td>
ಸದರಿ ವಾಹನಗಳ ಸಂಚಲನಕ್ಕೆ ಪ್ರತಿ ಕಿ.ಮೀ.ಗೆ ತಗಲುವ ವೆಚ್ಚದ ವಿವರ ಈ ಕೆಳಕಂಡಂತಿದೆ:

(ರೂ.ಗಳಲ್ಲಿ)
<table>
<tr><th rowspan="2">ಸಂಸ್ಥೆಗಳು</th><th colspan="2">ಪ್ರತಿ ಕಿ.ಮೀ.ಗೆ ತಗಲುವ ವೆಚ್ಚ</th></tr>
<tr><th>2019-20</th><th>ಏಪ್ರಿಲ್-2020 ರಿಂದ ಡಿಸೆಂಬರ್-2020</th></tr>
<tr><td>ಕ.ರಾ.ರ.ಸಾ.ನಿಗಮ</td><td>38.08</td><td>54.73</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>65.66</td><td>93.42</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>38.00</td><td>55.52</td></tr>
<tr><td>ಈ.ಕ.ರ.ಸಾ.ಸಂಸ್ಥೆ</td><td>38.04</td><td>52.41</td></tr>
<tr><td>ಒಟ್ಟು</td><td>179.78</td><td>256.08</td></tr>
</table>
</td></tr>
</table>

ಸಂಖ್ಯೆ: ಟಿಡಿ 49 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯ ಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಉಗಮ ಮತ್ತು ಬೆಳವಣಿಗೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 1961 ರಂದು ಅಸ್ಥಿತ್ವಕ್ಕೆ ಬಂದಿತು. ನಿಗಮದ ಪ್ರಮುಖ ಉದ್ದೇಶ ಸಮರ್ಥ, ಮಿತವ್ಯಯಕಾರಿ, ಅಗತ್ಯತೆಗನುಗುಣವಾಗಿ ಹಾಗೂ ಸೂಕ್ತ ಸಮನ್ವಯತೆಯಿಂದ ಕೂಡಿರುವ ಸೇವೆಗಳನ್ನು ಒದಗಿಸುವುದಾಗಿದ್ದು, ಇದು ಸಾರಿಗೆಯುಕ್ತ ಸಂಸ್ಥೆಯಾಗಿದ್ದು ಸೇವೆಗಳನ್ನು ವ್ಯಾವಹಾರಿಕ ತತ್ವಗಳನ್ನಾಧರಿಸಿ ಕಾರ್ಯಾಚರಣೆ ಮಾಡುತ್ತಿದೆ. ಇದು ಸೇವಾಧಾರಿತ ಸಂಸ್ಥೆಯಾಗಿದ್ದು, ಲಾಭಾದಾರಿತ ಸಂಸ್ಥೆಯಾಗಿರುವುದಿಲ್ಲ.

ವಿವಿಧ ಕ್ಷೇತ್ರಗಳಲ್ಲಿ ಕರ್ನಾಟಕವು ಸಾಧಿಸಿದ ತ್ವರಿತ ಅಭಿವೃದ್ಧಿಯ ಹಿನ್ನೆಲೆಯಲ್ಲಿ, ಕ.ರಾ.ರ.ಸಾ. ಸಂಸ್ಥೆಯು ಕನ್ನಡಿಗರ ಮತ್ತು ನೆರೆಯ ರಾಜ್ಯದವರ ಸಾರಿಗೆ ಬೇಡಿಕೆಗಳನ್ನು ಈಡೇರಿಸಲು ಅತ್ಯುತ್ತಮ ಸಂಸ್ಥೆಯಾಗಿ ರೂಪುಗೊಂಡಿತು. 31-03-1997ರ ಅಂತ್ಯಕ್ಕೆ, ಏಕೀಕೃತ ಸಂಸ್ಥೆಯು 19 ವಿಭಾಗಗಳಲ್ಲಿ ಕಾರ್ಯಾಚರಿಸುತ್ತಿತ್ತು. ಅವುಗಳಲ್ಲಿ 17 ವಿಭಾಗಗಳು ಗ್ರಾಮಾಂತರ ಸಾರಿಗೆ ವಿಭಾಗಗಳಾಗಿದ್ದು ಎರಡು ವಿಭಾಗಗಳು ಬೆಂಗಳೂರಿನಲ್ಲಿ ನಗರ ಸಾರಿಗೆ ಕಾರ್ಯಾಚರಣೆ ವಿಭಾಗಗಳಾಗಿತ್ತು. 108 ಘಟಕಗಳು, 2 ಪ್ರಾದೇಶಿಕ ಕಾರ್ಯಾಗಾರಗಳು ಮತ್ತು ಬೆಂಗಳೂರಿನಲ್ಲಿ ಒಂದು ಕೇಂದ್ರ ಕಚೇರಿಯನ್ನು ಹೊಂದಿತ್ತು. 281 ಖಾಯಂ ಮತ್ತು 11 ತಾತ್ಕಾಲಿಕ ಬಸ್ ನಿಲ್ದಾಣಗಳು ಹೊಂದಿತ್ತು. 59033 ಸಿಬ್ಬಂದಿಯನ್ನು ಹೊಂದಿದ್ದು, ಪ್ರತಿ ಅನುಸೂಚಿಗೆ ಸಿಬ್ಬಂದಿ ಪ್ರಮಾಣ 6.22ರಷ್ಟಿತ್ತು. 9493 ಅನುಸೂಚಿಗಳನ್ನು 13273 ಮಾರ್ಗಗಳಲ್ಲಿ ಕಾರ್ಯಾಚರಿಸಲಾಗುತ್ತಿತ್ತು. ಹಾಗೂ ಸರಾಸರಿ ದೈನಂದಿನ ಪರಿಣಾಮಕಾರಿ ಕಿ.ಮೀ.ಗಳು 27.95 ಲಕ್ಷವಾಗಿತ್ತು. ಅಂತರರಾಜ್ಯ ಮಾರ್ಗಗಳಲ್ಲಿ ಸಂಸ್ಥೆಯು ಪರಸ್ಪರ ಒಪ್ಪಂದದ ಮೇಲೆ ನೆರೆಯ ರಾಜ್ಯಗಳಿಗೆ ಕಾರ್ಯಾಚರಿಸಲಾಗುತ್ತಿತ್ತು. ಒಟ್ಟು 10476 ವಾಹನಗಳನ್ನು ಹೊಂದಿದ್ದು, ಸರಾಸರಿ ವಾಹನ ಉಪಯುಕ್ತತೆ 299.6 ಕಿ.ಮೀ.ಗಳಾಗಿತ್ತು. ಪ್ರತಿ ದಿನ ಸರಾಸರಿ 57.82 ಲಕ್ಷ ಪ್ರಯಾಣಿಕರನ್ನು ಕೊಂಡೊಯ್ಯಲಾಗುತ್ತಿತ್ತು.

ಕಾರ್ಯಾಚರಣೆ ದಕ್ಷತೆಯನ್ನು ಸುಧಾರಿಸಲು, ಪ್ರಯಾಣಿಕರಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ಒದಗಿಸಲು ಮತ್ತು ಕಾರ್ಯಾಚರಣೆಯ ಮೇಲೆ ಪರಿಣಾಮಕಾರಿ ಮೇಲ್ವಿಚಾರಣೆಯನ್ನು ಹೊಂದಲು, ಕರ್ನಾಟಕ ಸರ್ಕಾರವು ಸಂಸ್ಥೆಯನ್ನು ನಾಲ್ಕು ಪ್ರತ್ಯೇಕ ಸಂಸ್ಥೆಗಳನ್ನಾಗಿ ವಿಭಜಿಸಲು ತನ್ನ ಆದೇಶ ಸಂಖ್ಯೆ ಹೆಚ್‌ಟಿಡಿ 127/ಟಿಆರ್‌ಎ/96 ದಿನಾಂಕ 22-02-1997 ಅನ್ನು ಹೊರಡಿಸಿತು.

1996-97ರವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅವಿಭಜಿತ/ಏಕೀಕೃತ ಸಂಸ್ಥೆಯಾಗಿತ್ತು. 1997-98ನೇ ಸಾಲಿನಲ್ಲಿ, ರಾಜ್ಯ ಸರ್ಕಾರವು ಕ.ರಾ.ರ.ಸಾ.ಸಂಸ್ಥೆಯಿಂದ ಎರಡು ಹೊಸ ಸಂಸ್ಥೆಗಳನ್ನು ಬೇರ್ಪಡಿಸಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಇವುಗಳನ್ನು ಹೊಸದಾಗಿ ಪ್ರಾರಂಭಿಸಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕೇಂದ್ರ ಕಚೇರಿಯು ಬೆಂಗಳೂರಿನಲ್ಲಿ ಮತ್ತು ವಾ.ಕ.ರ.ಸಾ.ಸಂಸ್ಥೆ ಕೇಂದ್ರ ಕಚೇರಿಯು ಹುಬ್ಬಳ್ಳಿಯಲ್ಲಿರುತ್ತದೆ. ಬೆಂ.ಮ.ನ.ಸಾ.ಸಂಸ್ಥೆ ದಿನಾಂಕ 15-08-1997ರಂದು ಅಸ್ಥಿತ್ವಕ್ಕೆ ಬಂದಿದ್ದು, ಬೆಂಗಳೂರು ನಗರದ ನಗರ ಸಾರಿಗೆ ಬೇಡಿಕೆಯನ್ನು ಪೂರೈಸಲಾಗುತ್ತಿದೆ. ದಿನಾಂಕ 01-11-1997ರಂದು ವಾ.ಕ.ರ.ಸಾ.ಸಂಸ್ಥೆ ಅಸ್ಥಿತ್ವಕ್ಕೆ ಬಂದಿದ್ದು, ರಾಜ್ಯದ ವಾಯವ್ಯ ಭಾಗದ ಜಿಲ್ಲೆಗಳ ಸಾರಿಗೆ ಬೇಡಿಕೆಗಳಿಗನುಗುಣವಾಗಿ ಸೇವೆಯನ್ನು ಒದಗಿಸುತ್ತಿದೆ. ಈ.ಕ.ರ.ಸಾ.ಸಂಸ್ಥೆ ಎಂಬ ಮತ್ತೊಂದು ಸಂಸ್ಥೆಯನ್ನು ದಿನಾಂಕ 15-08-2000ರಂದು ಸ್ಥಾಪಿಸಲಾಯಿತು. ಅದರ ಕೇಂದ್ರ ಕಚೇರಿಯು ಗುಲ್ಬರ್ಗದಲ್ಲಿದ್ದು, ರಾಜ್ಯದ ಈಶಾನ್ಯ ಜಿಲ್ಲೆಗಳ ಸಾರಿಗೆ ಬೇಡಿಕೆಗಳಿಗನುಗುಣವಾಗಿ ಸೇವೆಯನ್ನು ಒದಗಿಸುತ್ತಿದೆ.

ಪ್ರಸ್ತುತ ಸಂಸ್ಥೆಯನ್ನು ನಾಲ್ಕು ಸಂಸ್ಥೆಗಳಾಗಿ ವಿಭಜಿಸಿದ ನಂತರ ಪ್ರಮುಖಾಂಶಗಳ ವಿವರ ಈ ಕೆಳಕಂಡಂತಿದೆ.

31-03-2020ರ ಅಂತ್ಯಕ್ಕೆ, ಸಂಸ್ಥೆಗಳು ಒಟ್ಟು 41 ವಿಭಾಗಗಳಲ್ಲಿ ಕಾರ್ಯಾಚರಿಸುತ್ತಿವೆ. ಅವುಗಳಲ್ಲಿ 34 ವಿಭಾಗಗಳು ಗ್ರಾಮಾಂತರ ಸಾರಿಗೆ ವಿಭಾಗಗಳಾಗಿದ್ದು, ಒಂದು ಬಸ್ ನಿಲ್ದಾಣ ವಿಭಾಗವಾಗಿದ್ದು, 6 ವಿಭಾಗಗಳು ಬೆಂಗಳೂರಿನಲ್ಲಿ ನಗರ ಸಾರಿಗೆ ಕಾರ್ಯಾಚರಣೆ ವಿಭಾಗಗಳಾಗಿರುತ್ತವೆ. 231 ಘಟಕಗಳು, 7 ಪ್ರಾದೇಶಿಕ ಕಾರ್ಯಾಗಾರಗಳು ಮತ್ತು ನಾಲ್ಕು ಕೇಂದ್ರ ಕಚೇರಿಯನ್ನು ಹೊಂದಿದ್ದು, 547 ಬಸ್ ನಿಲ್ದಾಣಗಳು ಹೊಂದಿರುತ್ತದೆ. 115210 ಸಿಬ್ಬಂದಿಯನ್ನು ಹೊಂದಿದ್ದು, ಪ್ರತಿ ಅನುಸೂಚಿಗೆ ಸಿಬ್ಬಂದಿ ಪ್ರಮಾಣ 4.96ರಷ್ಟಿದೆ. 23244 ಅನುಸೂಚಿಗಳನ್ನು 15547 ಮಾರ್ಗಗಳಲ್ಲಿ ಕಾರ್ಯಾಚರಿಸಲಾಗುತ್ತಿರುತ್ತದೆ ಹಾಗೂ ಸರಾಸರಿ ದೈನಂದಿನ ಪರಿಣಾಮಕಾರಿ ಕಿ.ಮೀ.ಗಳು 68.68 ಲಕ್ಷವಾಗಿರುತ್ತದೆ. ಅಂತರರಾಜ್ಯ ಮಾರ್ಗಗಳಲ್ಲಿ ಸಂಸ್ಥೆಯು ಪರಸ್ಪರ ಒಪ್ಪಂದದ ಮೇಲೆ ನೆರೆಯ ರಾಜ್ಯಗಳಿಗೆ ಕಾರ್ಯಾಚರಿಸಲಾಗುತ್ತಿರುತ್ತದೆ. ಒಟ್ಟು 25180 ವಾಹನಗಳನ್ನು ಹೊಂದಿದ್ದು, ಸರಾಸರಿ ವಾಹನ ಬಳಕೆ 315 ಕಿ.ಮೀ.ಗಳಾಗಿರುತ್ತದೆ. ಪ್ರತಿ ದಿನ ಸರಾಸರಿ 98.14 ಲಕ್ಷ ಪ್ರಯಾಣಿಕರನ್ನು ಕೊಂಡೊಯ್ಯಲಾಗುತ್ತಿದೆ.

ಮುಂದುವರೆದು ಆಡಳಿತ ವಿಕೇಂದ್ರೀಕರಣದಿಂದಾಗಿ ಸಾರ್ವಜನಿಕ ಪ್ರಯಾಣಿಕರ ಸಾರಿಗೆ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸಿ ಉತ್ತಮ ಸಾರಿಗೆ ಸೇವೆ ನೀಡಲಾಗುತ್ತಿದೆ. ಹೆಚ್ಚಿನ ಸಾರಿಗೆಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಕಾರ್ಯಾಚರಿಸುತ್ತಿದ್ದು ಸಾರ್ವಜನಿಕ ಪ್ರಯಾಣಿಕರ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸದರಿ ಗ್ರಾಮಾಂತರ ಸಾರಿಗೆಗಳನ್ನು ಕೇವಲ ಒಂದು ಬದಿಯ ದಟ್ಟಣೆ ಇದ್ದಾಗಿಯೂ ಕಾರ್ಯಾಚರಿಸಲಾಗುತ್ತಿದೆ. ಇನ್ನೂ ಹೆಚ್ಚಿನ ಸಾರಿಗೆ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಜನಪ್ರತಿನಿಧಿಗಳಿಂದ/ಸಾರ್ವಜನಿಕ ಪಯಾಣಿಕರಿಂದ ಬಂದ ಅಹವಾಲುಗಳಿಗೆ ಸ್ಪಂದಿಸಿ ಇನ್ನೂ ಹೆಚ್ಚಿನ ಸಾರಿಗೆ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಸಂಸ್ಥೆಗಳು ಬದ್ಧವಾಗಿದೆ.

ಒಟ್ಟಾರೆಯಾಗಿ ಸಂಸ್ಥೆಯನ್ನು 4 ಪ್ರತ್ಯೇಕ ಸಂಸ್ಥೆಯನ್ನಾಗಿ ವಿಭಜಿಸಿದ ನಂತರ ಸಾರ್ವಜನಿಕರಿಗೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಾರಿಗೆ ಸೌಲಭ್ಯ ನೀಡಲು ಮತ್ತು ಪ್ರಯಾಣಿಕರ ಬೇಡಿಕೆಗಳಿಗೆ ಕೂಡಲೇ ಸ್ಪಂದಿಸಲು ಹೆಚ್ಚಿನ ಅನುಕೂಲವಾಗಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ರ.ಸಾ.ನಿಗಮ

ಅನುಬಂಧ–ಆ

ನಾಲ್ಕೂ ಸಾರಿಗೆ ಸಂಸ್ಥೆಗಳಲ್ಲಿನ ವಾಹನಗಳ ಸಂಖ್ಯೆಗಳ ವಿಭಾಗವಾರು ಮಾಹಿತಿ

ಕ.ರಾ.ರ.ಸಾ.ನಿಗಮ		ಬೆಂ.ಮ.ಸಾ.ಸಂಸ್ಥೆ	
ವಿಭಾಗ	ಒಟ್ಟು ವಾಹನಗಳ ಸಂಖ್ಯೆ	ವಿಭಾಗ	ಒಟ್ಟು ವಾಹನಗಳ ಸಂಖ್ಯೆ
ಬೆಂಗಳೂರು ಕೇಂದ್ರ	741	ಉತ್ತರ	1440
ರಾಮನಗರ	512	ದಕ್ಷಿಣ	1118
ತುಮಕೂರು	619	ಪೂರ್ವ	1030
ಕೋಲಾರ	549	ಈಶಾನ್ಯ	915
ಚಿಕ್ಕಬಳ್ಳಾಪುರ	576	ಪಶ್ಚಿಮ	1173
ಮೈಸೂರು (ನಗರ)	439	ಕೇಂದ್ರೀಯ	861
ಮೈಸೂರು (ಗ್ರಾಮಾಂತರ)	676	**ಒಟ್ಟು**	**6537**
ಮಂಡ್ಯ	459		
ಚಾಮರಾಜನಗರ	554		
ಹಾಸನ	545		
ಚಿಕ್ಕಮಗಳೂರು	532		
ಮಂಗಳೂರು	602		
ಪುತ್ತೂರು	570		
ದಾವಣಗೆರೆ	355		
ಶಿವಮೊಗ್ಗ	354		
ಚಿತ್ರದುರ್ಗ	288		
ಒಟ್ಟು	**8371**		

ವಾ.ಕ.ರ.ಸಾ.ಸಂಸ್ಥೆ		ಈ.ಕ.ರ.ಸಾ.ಸಂಸ್ಥೆ	
ವಿಭಾಗ	ಒಟ್ಟು ವಾಹನಗಳ ಸಂಖ್ಯೆ	ವಿಭಾಗ	ಒಟ್ಟು ವಾಹನಗಳ ಸಂಖ್ಯೆ
ಬೆಳಗಾವಿ	706	ಕಲಬುರಗಿ ವಿ–1	473
ಹುಬ್ಬಳ್ಳಿ	473	ಕಲಬುರಗಿ ವಿ–2	457
ಧಾರವಾಡ	467	ಯಾದಗಿರಿ	369
ಶಿರಸಿ	559	ರಾಯಚೂರ	627
ಬಾಗಲಕೋಟೆ	682	ಬೀದರ	591
ಗದಗ	545	ಬಳ್ಳಾರಿ	401
ಚಿಕ್ಕೋಡಿ	631	ಕೊಪ್ಪಳ	444
ಹಾವೇರಿ	530	ಹೊಸಪೇಟೆ	496
ಹು–ಧಾ ನಗರ ಸಾರಿಗೆ	307	ವಿಜಯಪುರ	771
ಒಟ್ಟು	**4900**	**ಒಟ್ಟು**	**4629**